# ಮತ್ತಷ್ಟು ನಂಬಿಕೆಗಳು

ನಾಯಿ ಊಳಿಟ್ಟರೆ ಸಾವು ಖಚಿತ: ಇದು ಒಂದು ಮಟ್ಟಕ್ಕೆ ನಿಜ. ಆದರೆ, ನಾಯಿ ಊಳಿಡುವುದರಿಂದ ಸಾವು ಸಂಭವಿಸುವುದಿಲ್ಲ, ಸಾವು ಸಂಭವಿಸಿದ ನಂತರ ನಾಯಿ ಊಳಿಡುತ್ತದೆ. ಪ್ರತಿ ವ್ಯಕ್ತಿ ಅಥವಾ ಪ್ರಾಣಿ ಸತ್ತಾಗ ದೇಹದ ವಾಸನೆ ಬದಲಾಗುತ್ತದೆ. ಸತ್ತ ಕೆಲವೇ ನಿಮಿಷಗಳಲ್ಲಿ ದೇಹ ಕೆಡಲು ಆರಂಭಿಸುತ್ತದೆ. ನಾಯಿಯ ಮೂಗು ಮನುಷ್ಯನ ಮೂಗಿಗಿಂತಲೂ ಬಹಳವೇ ಸೂಕ್ಷ್ಮವಾದುದರಿಂದ ಅದಕ್ಕೆ ಸಾವಿನ ವಾಸನೆ ಬೇಗ ಹತ್ತಿ, ಆ ವಾಸನೆಯನ್ನು ಗ್ರಹಿಸಿ ಊಳಿಡುತ್ತದೆ.

ಕುದುರೆಯ ಲಾಳ ಬಾಗಿಲವಾಡಕ್ಕೆ ನೇತುಹಾಕುವಿಕೆ: ಈಜಿಪ್ಟ್ ಹಾಗೂ ಸುತ್ತಮುತ್ತಲ ದೇಶಗಳಲ್ಲಿ ಕುದುರೆಗಳನ್ನು ಪವಿತ್ರವಾದ ಪ್ರಾಣಿಗಳೆಂದು ಪರಿಗಣಿಸಲಾಗುತ್ತಿತ್ತು. ಕುದುರೆಯ ಲಾಳವೂ ಒಂದು ಪವಿತ್ರತೆಯ ಸಂಕೇತವಾಗಿತ್ತು. ಸಕಲ ಪವಿತ್ರ ವಸ್ತುಗಳೂ ಒಳಿತನ್ನೇ ತರುತ್ತವೆ ಎಂಬ ನಂಬಿಕೆಯ ಆಧಾರದ ಮೇಲೆ ಲಾಳವನ್ನು ಸಹ ಬಳಸಲಾಗುತ್ತಿತ್ತು. ಆದರೆ ಲಾಳವನ್ನು ಬಾಗಿಲಿನ ಚೌಕಟ್ಟಿಗೆ ಅಳವಡಿಸುವಾಗ ಅದು ಇಂಗ್ಲಿಷಿನ 'ಯು' ಅಕ್ಷರದಂತೆ ನೇತುಹಾಕಲ್ಪಟ್ಟರೆ/ ಮಳೆ ಹೊಡೆದು ಜಡಿಯಲ್ಪಟ್ಟರೆ ಆ 'ಯು' ಆಕಾರದಲ್ಲಿ



ಎಲ್ಲಾ ಸಮೃದ್ಧಿಯೂ ಸೇರುವುದೆಂದೂ, ಕನ್ನಡದ 'ಒಂದು' ಅಂಕಿಯ ಮಾದರಿಯಲ್ಲಿ ಅಳವಡಿಸಿದಲ್ಲಿ ಇರುವ ಎಲ್ಲಾ ಸಮೃದ್ಧಿಯೂ ನಾಶವಾಗುವುದೆಂದೂ ನಂಬಿಕೆ ಇತ್ತು. ಈಗ ಕುದುರೆ ಎಂದರೆ ರೇಸಿಂಗ್‌ಗೆಂದೇ ಇರುವ ಪ್ರಾಣಿ ಎಂಬಂತಾಗಿರುವುದರಿಂದಲೂ, ರೇಸ್‌ನಿಂದ ಮನೆ ಹಾಳಾಗುವುದೇ ಹೆಚ್ಚಾದ್ದರಿಂದಲೂ, 'ಕುದುರೇಗ್ ಹೋದ್ ಮಾನ ಲಾಳ ಹೊಡ್ಕೊಂಡ್ರೆ ಸಿಗಲ್ಲ' ಎಂಬುದೇ ಸೂಕ್ತ.

ಆಕ್ಷೀ ಎಂದಾಗ ಬ್ಲೆಸ್ ಯೂ ಎನ್ನುವುದು: ಇದಕ್ಕೆ ನಾವು ಚಿಕ್ಕಂದಿನಲ್ಲೇ ಕಲಿತ ಶಿಶುಗೀತೆಯ ಹಿನ್ನೆಲೆ ಪಡೆಯುವುದು ಉತ್ತಮ. 'ರಿಂಗಾ ರಿಂಗಾ ರೋಸಸ್, ಪಾಕೆಟ್ ಫುಲ್ ಆಫ್ ಪೋಸೀಸ್, ಹಶ್ಶಾ, ಹುಶ್ಶಾ, ಯೂ ಆಲ್ ಫಾಲ್ ಡೌನ್' ಎಂಬ ಶಿಶುಗೀತೆ 'ಗುಲಾಬಿ ಕೆಂಪಿನ ಗುಳ್ಳೆಗಳು, ಚೀಲದಿ ಮೂಲಿಕೆ ಗುಚ್ಛಗಳು, ಅಯ್ಯೋ ತಾಳಲು ಆಗದ ಸುಸ್ತು, ಧರೆಗುರುಳುವಿರಿ ನೀವ್ ಸತ್ತು' ಎಂಬುದೇ ಇದರ ನಿಜ ಅರ್ಥ. ಆಗ ಮಾರಿ ಎಂದು ಕರೆಸಿಕೊಳ್ಳುತ್ತಿದ್ದ ಸಿಡುಬಿನಿಂದ ಜನರು, ಯಾವ ಮೂಲಿಕೆಯಿಂದ ಗಾಳಿ ಹಾಕಿದರೂ ಪ್ರಯೋಜನವಾಗದೆ ಸಾಯುತ್ತಿದ್ದಾಗ, ಕಟ್ಟಿದ ಶೋಕ ತುಣುಕು ಇದು. ಆಗೆಲ್ಲಾ ಮಲೇರಿಯಾ, ಕಾಲರಾ, ಸಿಡುಬು ಇತ್ಯಾದಿಗಳು ಆವರಿಸಿದಾಗ ಜ್ವರ ಅದರ ಸಂಗಾತಿಯಾಗಿದ್ದು, ಜ್ವರ ಹೆಚ್ಚಿ ಜನ ಸಾಯುತ್ತಿದ್ದರು. ಮನುಷ್ಯ ಖಾಯಿಲೆ ಬೀಳುವುದಕ್ಕೆ ಮುನ್ಸೂಚನೆ ಒಂಟಿ ಸೀನು ಆಗಿರುತ್ತಿದ್ದು, ಸೀನು ವೃದ್ಧಿಸಿ, ಹಲವು ಸೀನುಗಳಾಗಿ, ಕಡೆಗೆ scene ಬದಲಾಗಿ last scene ಬಂದುಬಿಡುತ್ತಿತ್ತು. ಹಾಗಾಗದಿರಲಿ, ದೇವರು ಕಾಪಾಡಲಿ ಎಂಬ ಸದುದ್ದೇಶದಿಂದ ಆಕ್ಷೀ ಎಂದು ಸೀನಿದಾಕ್ಷಣ ಬ್ಲೆಸ್ ಯೂ ಎಂಬ ಪದ್ಧತಿ ಅಲ್ಲಿಯೂ, ಆಕ್ಷೀ ಎಂದವರೇ (ಅಥವಾ ಪಕ್ಕ ಇರುವವರು) ನಾರಾಯಣ ಎನ್ನುವುದು ಇಲ್ಲಿಯೂ ರೂಢಿಗೆ ಬಂದಿತು. ಸಣ್ಣ ಧೂಳಿನ ಕಣಕ್ಕೂ ಆಕ್ಷೀ ಎನ್ನುವ ಈಗಿನ ಕಾಲದಲ್ಲಿ ಬ್ಲೆಸ್ ಯೂಗಳು, ನಾರಾಯಣಗಳು ಅಪ್ರಸ್ತುತ. ಅಂತೆಯೇ ಒಂಟಿ ಸೀನು ಮತ್ತಷ್ಟು ಸೀನುಗಳ ಮೂಲಕ ಹಾದು, ಕಡೆಗೆ ಸಾವನ್ನು ತರುತ್ತಿದ್ದುದರಿಂದ ಸೀನುವುದನ್ನು ಅಪಶಕುನ ಎಂದು ನಂಬಿದ್ದರು. ಸೀನು ಒಂಟಿಯೇ ಇರಲಿ, ಜಂಟಿಯೇ ಇರಲಿ, ಹೆಚ್1 ಎನ್1 ಹಂದಿ ಸೀನಿದರೆ ಮಾತ್ರ (ಅಥವಾ ಅಂತಹ ರೋಗವಿರುವವರು ಸೀನಿದರೆ ಮಾತ್ರ) ಅಪಾಯವೇ ಹೊರತು ಕಂಡ ಕಂಡ ಸೀನುಗಳಿಗೆಲ್ಲಾ ಅಪಶಕುನ ಎನ್ನುತ್ತಾ ಹೆದರಿ ಕೆಲಸ ಮುಂದೂಡುವುದು ದಡ್ಡತನ.

ಟಚ್ ವುಡ್: ಹಿಂದಿನ ಕಾಲದಲ್ಲಿ ದೇವತೆಗಳು ಮರಗಳಲ್ಲಿ ವಾಸಿಸುತ್ತಾರೆ ಎಂಬ ನಂಬಿಕೆ ಇದ್ದಿತು. ಈಗಲೂ ಅರಳಿಮರ, ಆಲದಮರಗಳಲ್ಲಿ ದೇವತೆಗಳಿರುತ್ತಾರೆಂಬ ನಂಬಿಕೆ ಇದ್ದೇ ಇದೆ. ಯಾವುದೇ ಒಳ್ಳೆಯ ಕೆಲಸ ಆಗಬೇಕಾದರೆ ಮರವನ್ನು ಮುಟ್ಟಿ ಕೇಳಿಕೊಂಡರೆ ಆ ಕೆಲಸ ಆಗುವುದೆಂದೂ, ಕೆಲಸ ಆದ ನಂತರ ಥ್ಯಾಂಕ್ಸ್ ಹೇಳಲು ಮತ್ತೊಮ್ಮೆ ಮರ ಮುಟ್ಟುವುದೆಂದೂ ಪದ್ಧತಿ ಜಾರಿಗೆ ಬಂದಿತು. ಕೇಡಿನ ಶಂಕೆ ಬಂದಾಗಲೂ ಮರ ಮುಟ್ಟಿ ಹಾಗಾಗದಿರಲಿ ಎಂದು ಕೇಳುವುದು ಪದ್ಧತಿಗೆ ಬಂದಿತು. ಆದರೆ ಮನಸ್ಸಿನಲ್ಲಿ ಮೂಡಿದ ಬಯಕೆಯನ್ನು ಮರ ಮುಟ್ಟಿ, ಆಶೀರ್ವಾದ ಪಡೆದು, ನೆರವೇರಿಸಿಕೊಳ್ಳಲು ಸಮಯ ಅಥವಾ ಅವಕಾಶ ವಿಲ್ಲವಾದಾಗ ಮಾನಸಿಕವಾಗಿ ಮರ ಮುಟ್ಟುವ ಕ್ರಮವೇ ಟಚ್ ವುಡ್ ಎಂದು ಹೇಳುವುದು. ಇದು ಹೀಗೆಯೇ ಮುಂದುವರೆದು 'ವುಡ್' ಎಂದರೆ 'ಮರ' ಆದುದರಿಂದ ಟಚ್ ವುಡ್ ಎನ್ನುತ್ತಾ ಟೇಬಲ್, ಕುರ್ಚಿಗಳನ್ನು ಮುಟ್ಟುವುದು ಇಂದಿನ ಜನಗಳಲ್ಲಿ ಹಾಗೆಯೇ ಹರಿದುಬಂದ ಮೂಢನಂಬಿಕೆಯಾಗಿ ನಿಂತಿದೆ.

ಮಾನವ ಪರಿಸ್ಥಿತಿಯ ಕೈಗೂಸು, ಹಿರಿಯರು ರೂಪಿಸಿದ ಪುತ್ಥಳಿ. ಹಿರಿಯರು ಭಯದಿಂದ ಮತ್ತು ಅಜ್ಞಾನದಿಂದ ಆತುಕೊಂಡು ಹಲವಾರು ವಿಷಯಗಳು, ಕ್ರಮಗಳು, ಪದ್ಧತಿಗಳು ಪ್ರಶ್ನಾತೀತವಾಗಿ ಪರಂಪರಾಗತವಾಗಿ ಬಂದಿವೆ. ಅವುಗಳನ್ನು ಒರೆಗೆ ಹಚ್ಚಿ, ಇಂದಿಗೆ ಯಾವುದು ಪ್ರಸ್ತುತ ಮತ್ತು ಯಾವುದು ಅಪ್ರಸ್ತುತ ಎಂದು ಆಲೋಚಿಸಿ ಸಮರ್ಪಕವಾದುದನ್ನು ಆಯ್ಕೆ ಮಾಡಿ ಮುಂದೆ ಸಾಗಿದರೆ ಜೀವನ ಸುಗಮ, ಇಲ್ಲವಾದರೆ ಅನಗತ್ಯ ಚಿಂತೆಗಳ ಭಾರಕ್ಕೆ ಸಿಲುಕಿ ನಮ್ಮ ಭವಿಷ್ಯ ನಾವೇ ಹಾಳು ಮಾಡಿಕೊಳ್ಳುತ್ತೇವೆ ಎಂಬುದಷ್ಟೇ ನಿತ್ಯಸತ್ಯ.

ಪ್ರತಿಯೊಂದನ್ನೂ ಪ್ರಶ್ನಿಸಿ ಎನ್ನುತ್ತಿದ್ದರು ಡಾ.ಎಚ್. ನರಸಿಂಹಯ್ಯನವರು. ಕೇಳಿ ಬಾಳಿದರೆ ಸ್ವರ್ಗಸುಖ, ಕೇಳದೆಯೇ ಹಿಂಬಾಲಿಸಿದರೆ ಸೊರಗೀತು ಸುಖ.

■ ವೈ–ಚಾರಿ

ಇದು ವೈ-ಚಾರಿಯ ಕಡೆಯ ಲೇಖನ. ಓದುಗರು ತಮ್ಮ ನಂಬಿಕೆಗಳು, ಅನಿಸಿಕೆಗಳ ಬಗ್ಗೆ ಬೆಳಕು ಚೆಲ್ಲಲು ಕೇಳಿದಲ್ಲಿ ಮತ್ತೆ ಈ ಅಂಕಣ ಚಿತ್ರಣದ ಅವಲೋಕನ. ಓದಿ, ಆನಂದಿಸಿ, ಕಿರಿಕಿರಿಪಟ್ಟು, ಪ್ರತಿಕ್ರಿಯೆ ನೀಡಿದ ಸರ್ವರಿಗೂ ವೈ-ಚಾರಿ ಆಭಾರಿ.